ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002
ZILLA PANCHAYAT OFFICE, BELGAUM-590002

ದೂರವಾಣಿ Telephone: 0831-2407201, 0831-2407206, 0831-2431640
ಫ್ಯಾಕ್ಸ/Fax: 0831-2429662
e-mail: ceozpbelgaum@yahoo.co

ವಿಷಯ : ಯೋಜನೇತರ ಲೆಕ್ಕ ಶಿರ್ಷಿಕೆ -3054 (ನಿರ್ವಹಣಾ ಅನುದಾನ) ಅಡಿ ಜಿಲ್ಲಾ ಪಂಚಾಯತ ವ್ಯಾಪ್ತಿಯಲ್ಲಿ ಕೈಗೊಳ್ಳುವ ಗ್ರಾಮೀಣ ರಸ್ತೆಗಳ ನಿರ್ವಹಣೆ / ದುರಸ್ತಿ ಹಾಗೂ ಅವುಗಳ ಅಭಿವೃದ್ದಿ ಕಾಮಗಾರಿಗಳ ಸಲುವಾಗಿ ಕಾರ್ಯಪಡೆ ರಚನೆ, ಮಾರ್ಗದರ್ಶಿ ಹಾಗೂ ಅನುದಾನ ಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂ:ಗ್ರಾಅಪ:209:ಆರ್ಆರ್‌ಸಿ:2013(1) ದಿನಾಂಕ: 26-11-2013.
2) ಸರ್ಕಾರದ ಆದೇಶ ಸಂ:ಗ್ರಾಅಪ:209:ಆರ್ಆರ್‌ಸಿ:2013(2) ದಿನಾಂಕ: 26-11-2013.
3) ಸರ್ಕಾರದ ಆದೇಶ ಸಂ:ಗ್ರಾಅಪ:209/1:ಆರ್ಆರ್‌ಸಿ:2013 ದಿನಾಂಕ: 28-01-2014.

***

**ಪ್ರಸ್ತಾವನೆ :**

ಯೋಜನೇತರ ಲೆಕ್ಕಶಿರ್ಷಿಕೆ 3054 (ನಿರ್ವಹಣಾ ಅನುದಾನ) ಅಡಿ ಸನ್-2013-14 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಗ್ರಾಮೀಣ ರಸ್ತೆ ದುರಸ್ತಿ / ನವೀಕರಣ ಮತ್ತು ನಿರ್ವಹಣೆಯ ಕಾಮಗಾರಿಗಳಿಗಾಗಿ ಜಿಲ್ಲಾ ಪಂಚಾಯತಿಗೆ ತಾಲೂಕುವಾರು ಹಂಚಿಕೆ ಮಾಡಿ ಆಯಾ ತಾಲೂಕಿನಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಪಡೆಯನ್ನು ರಚನೆ ಮಾಡಿಕೊಂಡು ರಸ್ತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಂತೆ ಜಿಲ್ಲಾ ಪಂಚಾಯತಿಗೆ ಸೂಚಿಸಿ, ಓದಲಾದ (1) ರ ಸರ್ಕಾರದ ಆದೇಶ ಹೊರಡಿಸಲಾಗಿದೆ. ಸದರಿ ಆದೇಶದಂತೆ ಸನ್-2013-14 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಯು ಅನುಷ್ಠಾನಗೊಳಿಸಿರುವ ರಸ್ತೆ ಮೋರಿ ಮತ್ತು ಸೇತುವೆ ಕಾಮಗಾರಿಗಳ ಬಿಲ್ಲುಗಳ ಪಾವತಿಗಾಗಿ ಪ್ರಸ್ತುತ ಸಾಲಿನ ಆಯವ್ಯಯ ಯೋಜನೇತರ ಲೆಕ್ಕ ಶಿರ್ಷಿಕೆ 3054-80-196-1-01-300(NP) ಅಡಿ ಒದಗಿಸಿದ ಅನುದಾನದಲ್ಲಿ ರೂ. 698.15 ಲಕ್ಷಗಳನ್ನು ಬಿಡುಗಡೆ ಮಾಡಲು ಓದಲಾದ (3) ರಲ್ಲಿ ಸರ್ಕಾರವು ಸಹಮತಿ ನೀಡಿರುತ್ತದೆ. ಅದರಂತೆ ಈ ಅನುದಾನವನ್ನು ತಾಲೂಕುವಾರು ಹಂಚಿಕೆ ಮಾಡಿ ಬಿಡುಗಡೆ ಮಾಡಲು ಈ ಕೆಳಗಿನಂತೆ ಆದೇಶ.

ಕ್ರಸಂ:ಜಿಪ/ಅಭಿವೃದ್ಧಿ/ರ.ಕಾ/ವಿವ- /2013-14 ದಿನಾಂಕ: -02-2014.

## ಆದೇಶ

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಪ್ರಸ್ತುತ 2013-14 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಯೋಜನೇತರ ಲೆಕ್ಕ ಶಿರ್ಷಿಕೆ 3054 ರಡಿ ಗ್ರಾಮೀಣ ರಸ್ತೆ ದುರಸ್ತಿ / ನವೀಕರಣ ಮತ್ತು ನಿರ್ವಹಣೆಯ ಕಾಮಗಾರಿಗಳಿಗಾಗಿ ನಿಗದಿಪಡಿಸಿ ಹಂಚಿಕೆ ಮಾಡಿದ ಅನುದಾನ ರೂ. 698.15 ಲಕ್ಷಗಳನ್ನು (ಆರುನೂರಾ ತೊಂಬತ್ತೆಂಟು ಲಕ್ಷ ಹದಿನೈದು ಸಾವಿರ ಮಾತ್ರ) ಗಳನ್ನು ಲೆಕ್ಕ ಶಿರ್ಷಿಕೆ 3054 -80-196-1-01-300 ಯೋಜನೇತರ (ಲಿಂಕ್ ಹೆಡ್ 3054-00-101-0-28-200 ನಿರ್ವಹಣೆ / ಯೋಜನೇತರ) ರಡಿ ಈ ಕೆಳಗೆ ತೋರಿಸಿರುವಂತೆ ತಾಲೂಕುಗಳಿಗೆ ಅನುದಾನ ಹಂಚಿಕೆ ಮಾಡಿ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ / ಚಿಕ್ಕೋಡಿ ಇವರಿಗೆ ಅನುದಾನ ಬಿಡುಗಡೆ ಮಾಡಲು ಆದೇಶಿಸಿದೆ.

# ಅನುಬಂಧ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವಿಭಾಗ | ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನ |
|---|---|---|
| 1 | 2 | 3 |
| **ಪಂ.ರಾ.ಇಂ. ಇಂಜನೀಯರಿಂಗ್ ವಿಭಾಗ ಬೆಳಗಾವಿ** | | |
| 1 | ಬೈಲಹೊಂಗಲ | 51.08 |
| 2 | ಬೆಳಗಾವಿ | 53.89 |
| 3 | ಖಾನಾಪೂರ | 48.83 |
| 4 | ರಾಮದುರ್ಗ | 48.39 |
| 5 | ಸವದತ್ತಿ | 44.97 |
| | **ಒಟ್ಟು** | **247.16** |
| **ಪಂ.ರಾ.ಇಂ. ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ** | | |
| 6 | ಅಥಣಿ | 122.89 |
| 7 | ಚಿಕ್ಕೋಡಿ | 98.87 |
| 8 | ಗೋಕಾಕ | 80.90 |
| 9 | ಹುಕ್ಕೇರಿ | 71.98 |
| 10 | ರಾಯಬಾಗ | 76.35 |
| | **ಒಟ್ಟು** | **450.99** |
| | **ಅಂತೂ ಒಟ್ಟು** | **698.15** |

ಬೆಳಗಾವಿ ಜಿಲ್ಲೆಯ ಎರಡು ವಿಭಾಗದ, ಅನುಷ್ಠಾನ ಅಧಿಕಾರಿಗಳಾದ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ / ಚಿಕ್ಕೋಡಿ ಇವರು ಅನುಬಂಧದಲ್ಲಿ ತೋರಿಸಿರುವ ತಾಲೂಕುವಾರು ಹಂಚಿಕೆ ಮಾಡಿ ಬಿಡುಗಡೆ ಮಾಡಿರುವ ಅನುದಾನವನ್ನು ಅನುಮೋದಿತ ಕ್ರಿಯಾ ಯೋಜನೆಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಈ ಕೆಳಗಿನ ಷರತ್ತಿಗೊಳ್ಳಪಟ್ಟು ಅನುದಾನ ವಿನಿಯೋಗಿಸತಕ್ಕದ್ದು.

**ಷರತ್ತುಗಳು:**

1. ಯೋಜನೇತರ ಲೆಕ್ಕ ಶಿರ್ಷಿಕೆ -3054 ರ ಕಾರ್ಯಕ್ರಮದ ಕಾಮಗಾರಿಗಳ ಗುಣಮಟ್ಟ ನಿರ್ಧರಿಸಲು ಎಲ್ಲ ಕಾಮಗಾರಿಗಳನ್ನು Thrid Party ತಪಾಸಣೆಗೆ ಒಳಪಡಿಸುವ ನಿಬಂಧನೆಗೊಳಪಡಿಸಿದ್ದು, ಅದರಂತೆ ಕಡ್ಡಾಯವಾಗಿ ಕಾಮಗಾರಿಗಳನ್ನು Third Party ( SQM /DQM) ತಪಾಸಣೆಗೆ ಒಳಪಡಿಸತಕ್ಕದ್ದು.

2. ಈ ಅನುದಾನವನ್ನು ಈಗಾಗಲೇ 2013-14 ರಲ್ಲಿ ಜಿಲ್ಲಾ ಪಂಚಾಯತಿಯ ಟಾಸ್ಕಪೋರ್ಸ ಸಮಿತಿಯ ಕ್ರಿಯಾ ಯೋಜನೆಯಲ್ಲಿ ಅನುಮೋದಿಸಿದ ರಸ್ತೆ,ಮೋರಿ ಮತ್ತು ಸೇತುವೆ ಕಾಮಗಾರಿ ಹೊರತು ಬೇರೆ ಯಾವುದೇ ಕಾಮಗಾರಿಗಳಿಗೆ ಉಪಯೋಗಿಸತಕ್ಕದ್ದಲ್ಲ.

3. ಜಿಲ್ಲಾ ಪಂಚಾಯತಿಯು ಬಿಡುಗಡೆ ಮಾಡಿರುವ ಅನುದಾನವನ್ನು ಜಿಲ್ಲಾ ಖಜಾನೆಯು ಪ್ರಸ್ತುತ ವರ್ಷಕ್ಕೆ ನಿಗದಿಗೊಳಿಸುವ ದಿನಾಂಕದೊಳಗೆ ಡ್ರಾ ಮಾಡಿ ಪೂರ್ಣವಾಗಿ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನ ವ್ಯಪಗತವಾಗದಂತೆ ನೋಡಿಕೊಳ್ಳತಕ್ಕದ್ದು. ಈ ಅನುದಾನ ನವೀಕರಣಕ್ಕೆ (Revalidation) ಯಾವುದೇ ಅವಕಾಶವಿರುವುದಿಲ್ಲ.

4. ಬಳಕೆಯಾದ ಹಣ ಹಾಗೂ ಕಾಮಗಾರಿ ಪ್ರಗತಿ ವಿವರವನ್ನು ಇಲಾಖೆಯ Workoft Website ನಲ್ಲಿ Upload ಮಾಡತಕ್ಕದ್ದು.

5. ರಸ್ತೆ ಮತ್ತು ಸೇತುವೆ ನಿರ್ವಹಣಾ ಕಾಮಗಾರಿಗಳಿಗಾಗಿ ಬಿಡುಗಡೆಯಾದ ಅನುದಾನಕ್ಕೆ ಪ್ರತಿ ತ್ರೈಮಾಸಿಕ ಅವದಿಗೆ ಅಂತ್ಯಗೊಂಡಂತೆ ಆರ್ಥಿಕ ಮತ್ತು ಭೌತಿಕ ಪ್ರಗತಿಯೊಂದಿಗೆ ಹಣ ಬಳಕೆ ಪ್ರಮಾಣ ಪತ್ರವನ್ನು ತಪ್ಪದೇ ಸಲ್ಲಿಸತಕ್ಕದ್ದು.

6. ಈ ಯೋಜನೆಯ ಪೂರ್ಣ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರ ಹಾಗೂ ವೆಚ್ಚದ ವಿವರಗಳನ್ನು ದಿನಾಂಕ: 15-04-2014 ರೊಳಗೆ ಯಾವುದೇ ನೆನಪೋಲೆಗೆ ಅವಕಾಶ ನೀಡದಂತೆ ಸರ್ಕಾರಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.

(ದೀಪ ಚೋಳನ)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.

**<u>ಪ್ರತಿಯನ್ನು: ಗೌರವಗಳೊಂದಿಗೆ ಸಲ್ಲಿಸಿದೆ.</u>**

1) ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಬೆಂಗಳೂರು.
2) ಅಧ್ಯಕ್ಷರು, ಜಿಲ್ಲಾ ಪಂಚಾಯತ ಬೆಳಗಾವಿ.
3) ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ ಬೆಳಗಾವಿ.

**<u>ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>**

1) ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
2) ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ
3) ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ / ಚಿಕ್ಕೋಡಿ.
4) ಜಿಲ್ಲೆಯ ಎಲ್ಲ ಸಹಾಯಕ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ಉಪ ವಿಭಾಗ __________.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.